ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಆರ್.ಟಿ.ಇ/ಶುಲ್ಕ ಮರುಪಾವತಿ/ಅಪೀಲು/2017-18 ದಿನಾಂಕ: 11-10-2018

## : : ಸುತ್ತೋಲೆ : :

ವಿಷಯ: 2016-17 ಮತ್ತು 2017-18ನೇ ಸಾಲಿನ ಆರ್.ಟಿ.ಇ ಶುಲ್ಕಮರುಪಾವತಿ ಅಪೀಲು ತಂತ್ರಾಂಶದಲ್ಲಿ ಅನುಸರಿಸಬೇಕಾದ ಕ್ರಮಗಳು

ಉಲ್ಲೇಖ: 1. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ7(8)ಪ್ರಾಸಿಅ/ಆರ್.ಟಿ.ಇ/ಶುಲ್ಕ ಮರುಪಾವತಿ 2016-17, ದಿನಾಂಕ: 30-12-2017.

2. ಸರ್ಕಾರದ ಆದೇಶ ಸಂಖ್ಯೆ: ಇಡಿ 270 ಪಿಜಿಸಿ 2018, ದಿನಾಂಕ:01-09-2018.

3. ಉಪನಿರ್ದೇಶಕರು(ಆಡಳಿತ)/ಕ್ಷೇತ್ರ ಶಿಕ್ಷಣಾಧಿಕಾರಿಗಳು/ಶಾಲಾ ಆಡಳಿತ ಮಂಡಳಿಗಳ ಮನವಿಗಳು.

4. ಈ ಕಛೇರಿಯ ಸಮ ಪತ್ರದ ಸುತ್ತೋಲೆ: ದಿನಾಂಕ: 6.10.2018

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016-17 ಮತ್ತು 2017-18ನೇ ಸಾಲಿನಲ್ಲಿ ಆನ್‌ಲೈನ್ ಮುಖಾಂತರ ಶಿಕ್ಷಣ ಹಕ್ಕು ಕಾಯಿದೆಯ ಸೆಕ್ಷನ್ 12(1)(ಸಿ) ಅಡಿ ದಾಖಲಾದ ಮಕ್ಕಳ ಶುಲ್ಕಮರುಪಾವತಿ ಮಾಡುವ ಬಗ್ಗೆ ದಿನಾಂಕ:6.10.2018ರಂದು ಅಪೀಲ್ ಸ್ವಾಫ್ಟ್‌ವೇರ್ ಬಿಡುಗಡೆ ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸುತ್ತೋಲೆಯನ್ನು ಉಲ್ಲೇಖ (4) ರಂತೆ ಕಳುಹಿಸಲಾಗಿದೆ. ಈ ಸುತ್ತೋಲೆಗೆ ಮುಂದುವರಿದು 2017-18ನೇ ಸಾಲಿನ ಅಪೀಲು ತಂತ್ರಾಂಶದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶುಲ್ಕ ಮರುಪಾವತಿಗೆ ಕ್ರಮ ವಹಿಸಲು ಮತ್ತೊಮ್ಮೆ ತಿಳಿಸಲಾಗಿದೆ.

- **RTE Student Details to be added.**

ಮೊದಲ ಹಂತದಲ್ಲಿ 2016-17 ರ ಅಫೀಲು ತಂತ್ರಾಂಶದಲ್ಲಿ 2012-13, 2013-14, 2014-15, 2015-16 ಮತ್ತು 2016-17 ರಲ್ಲಿ ದಾಖಲಾಗಿ ತಂತ್ರಾಂಶದಲ್ಲಿ ಬಿಟ್ಟು ಹೋಗಿರುವ ಆರ್.ಟಿ.ಇ ಮಕ್ಕಳನ್ನು ಸೇರಿಸಲು ಅವಕಾಶ ಮಾಡಿಕೊಡಲಾಗಿದೆ.

2017-18 ನೇ ಸಾಲಿನ ಅಪೀಲು ತಂತ್ರಾಂಶದಲ್ಲಿ 2017-18 ರ ಎಂಟ್ರಿ ಲೆವೆಲ್ ಗಳಲ್ಲಿ ಬಿಟ್ಟು ಹೋಗಿರುವ ಅಂದರೆ ಈ ಸಾಲಿನಲ್ಲಿ ಎಲ್.ಕೆ.ಜಿ ಮತ್ತು ಒಂದನೇ ತರಗತಿ ಆರ್.ಟಿ.ಇ ಮಕ್ಕಳನ್ನು ಮಾತ್ರ ಸೇರಿಸಲು ಅವಕಾಶ ಮಾಡಿದೆ.

- **Expenditure, Fees or Audit details need to be corrected.**

ಮೇಲಿನ ಹಂತದಲ್ಲಿ ದಿನಾಂಕ:06-10-2018ರ ಸುತ್ತೋಲೆಯಲ್ಲಿ ವಿವರಿಸಿರುವಂತೆ ಕ್ರಮವಹಿಸಲು ತಿಳಿಸಲಾಗಿದೆ. ಈ ಹಂತದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂದು ಸ್ಪಷ್ಟಪಡಿಸಿದೆ.

- **Both.**

2017-18 ನೇ ಸಾಲಿನ ಅಪೀಲು ತಂತ್ರಾಂಶದಲ್ಲಿ 2017-18 ರ ಎಂಟ್ರಿ ಲೆವೆಲ್ ಗಳಲ್ಲಿ ಬಿಟ್ಟು ಹೋಗಿರುವ ಅಂದರೆ ಈ ಸಾಲಿನಲ್ಲಿ ಎಲ್.ಕೆ.ಜಿ ಮತ್ತು ಒಂದನೇ ತರಗತಿಗೆ ದಾಖಲಾದ ಆರ್.ಟಿ.ಇ ಮಕ್ಕಳನ್ನು ಮಾತ್ರ ಸೇರಿಸಲು ಅವಕಾಶ ಮಾಡಿದೆ. ಎರಡನೇ ಹಂತದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ರವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ ಇ-ಮೇಲ್ ಮುಖಾಂತರ
2. ರಾಜ್ಯದ ಎಲ್ಲಾ ವಲಯ/ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಇ-ಮೇಲ್ ಮುಖಾಂತರ.
3. ಸಂಬಂಧಿಸಿದ ಶಾಲಾ ಆಡಳಿತ ಮಂಡಳಿಗಳಿಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಅಗತ್ಯ ಕ್ರಮವಹಿಸುವುದಕ್ಕಾಗಿ.

ಪ್ರತಿಯನ್ನು:

1. ಅಪರ ನಿರ್ದೇಶಕರು (ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಸರ್ಕಾರದ ಆದೇಶದಂತೆ ತುರ್ತಾಗಿ ತಂತ್ರಾಂಶ ಅಭಿವೃದ್ಧಿ ಪಡಿಸಿ, ತಂತ್ರಾಂಶದಲ್ಲಿನ ನಿರ್ಬಂಧಗಳನ್ನು ಸಡಿಲಿಸಿ ತಂತ್ರಾಂಶ ಬಿಡುಗಡೆಗೊಳಿಸುವುದಕ್ಕಾಗಿ

2. ಹಿರಿಯ ಸಹಾಯಕ ನಿರ್ದೇಶಕರು, ಇ-ಗವರ್ನೆನ್ಸ್ ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸುತ್ತಾ ಸರ್ಕಾರದ ಆದೇಶದಂತೆ ತಂತ್ರಾಂಶ ಅಭಿವೃದ್ಧಿ ಪಡಿಸಿ ಶಾಲೆಗಳ ಹಂತಕ್ಕೆ ಬಿಡುಗಡೆ ಮಾಡಿ, ಸಂಬಂಧಿಸಿದ ತಂತ್ರಾಂಶದ ಬಗ್ಗೆ ತಾಂತ್ರಿಕ ಸಮಸ್ಯೆಗಳ ಬಗ್ಗೆ ಅಗತ್ಯ ಕ್ರಮವಹಿಸುವುದಕ್ಕಾಗಿ.

3. ಹಿರಿಯ ಸಹಾಯಕ ನಿರ್ದೇಶಕರು, ಎಸ್ಎಟಿಎಸ್ ವಿಭಾಗ, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಆರ್.ಟಿ.ಇ ಅಡಿ ದಾಖಲಾಗಿರುವ ವಿದ್ಯಾರ್ಥಿಗಳು ಶುಲ್ಕಮರುಪಾವತಿ ತಂತ್ರಾಂಶದಲ್ಲಿ ಇಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಇ-ಆಡಳಿತ ವಿಭಾಗಕ್ಕೆ ತುರ್ತಾಗಿ ಒದಗಿಸುವ ಬಗ್ಗೆ ಅಗತ್ಯ ಕ್ರಮವಹಿಸುವುದಕ್ಕಾಗಿ.

4. ಪ್ರೋಗ್ರಾಮರ್ಸ್, ಸಾಫ್ಟ್‌ವೇರ್ ಡೆವಲಪ್ ಮೆಂಟ್ ಸೆಂಟರ್, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಆರ್.ಟಿ.ಇ ಅಡಿ ದಾಖಲಾತಿಯಾಗಿರುವ ವಿದ್ಯಾರ್ಥಿಗಳು ಶುಲ್ಕಮರುಪಾವತಿ ತಂತ್ರಾಂಶದಲ್ಲಿ ಇಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಮಾಹಿತಿಯನ್ನು ಇ-ಆಡಳಿತ ವಿಭಾಗಕ್ಕೆ ತುರ್ತಾಗಿ ಒದಗಿಸುವ ಬಗ್ಗೆ ಅಗತ್ಯ ಕ್ರಮವಹಿಸುವುದಕ್ಕಾಗಿ.

5. ಕಛೇರಿ ಪ್ರತಿ.

* * * * *